ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ ಎನ್ಎಸ್ - 19

ೀ ವರ್ಷ 43ನೇ ಸಂಚಿಕೆ ಕೊಪ್ಪ 28-7-1985 ಭಾನುವಾರ ಬೆಲೆ 40 ಪೈಸೆ

ಪರಿಣಾಮಕಾರಿಯಾಗಿಲ್ಲದ ಪೋಲೀಸ್ ಸೇವೆ ಸುಧಾರಿಸುವತ್ತ

ಸೇವಾ ಅವಧಿಯಲ್ಲಿ ಮತ್ತೊಮ್ಮೆ ತರಬೇತಿ

ಹಂಪಿಹರಪುರ: ಇಲ್ಲಿನ ನೂತನ ಪೋಲೀಸ್ ಠಾಣೆಯ ಉದ್ಘಾಟನೆಯನ್ನು ಜು. 21 ರಂದು ಹರಿಹರಪುರ ಮಠಾಧೀಶರ ಅಧ್ಯಕ್ಷತೆಯಲ್ಲಿ ನಡೆದ ವರ್ಣರಂಜಿತ ಸಮಾರಂಭದಲ್ಲಿ ರಾಜ್ಯ ಪೋಲೀಸ್ ಮಹಾ ನಿರ್ದೇಶಕ ಬಿ.ಎನ್. ಗರುಡಾಚಾರ್ ನೆರವೇರಿಸಿದರು.

ಎಲ್ಲರಿಗೂ ಕಾನೂನು ಪ್ರಕಾರ ರಕ್ಷಣೆ ಕೊಡಬೇಕಾದ ಪೋಲೀಸರ ಆದ್ಯ ಕರ್ತವ್ಯವನ್ನು ನಾವು ಸಾಕಷ್ಟು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿಲ್ಲ ಎಂದ ಅವರು, ಈ ಕಾರಣದಿಂದ ಪೋಲೀಸರಿಗೆ ವೃತ್ತಿ ಪೂರ್ವ ತರಬೇತಿ ಮಾತ್ರವಲ್ಲದೆ ಸೇವಾ ಸಮಯದಲ್ಲಿಯೂ ಮತ್ತೊಮ್ಮೆ ತರಬೇತಿ ಕೊಡುವುದಕ್ಕೆ ಈಗ ಹೆಚ್ಚಿನ ಗಮನ ನೀಡುತ್ತಿರುವುದಾಗಿ ತಿಳಿಸಿದರು.

ಮುಖ್ಯ ಅತಿಥಿಗಳಾಗಿದ್ದ ಜಿಲ್ಲಾಧಿಕಾರಿ ಬಿ. ಪಾರ್ಥಸಾರಥಿ, "ಸರ್ಕಾರದ ಇಲಾಖೆಗಳಿಂದ ದಕ್ಷತೆ ನಿರೀಕ್ಷಿಸಬೇಕಾದರೆ ಸಾರ್ವಜನಿಕರ ಸಹಕಾರ, ಪ್ರತಿಕ್ರಿಯೆ ಬಹಳ ಮುಖ್ಯ. ಕಾನೂನು ಪಾಲನೆಯ ಅರಿವು ಜನರಲ್ಲಿ ಮೊದಲು ಮೂಡಬೇಕು" ಎಂದರು.

ಈ ಠಾಣೆಯ ವ್ಯಾಪ್ತಿಯ ಹತ್ತಾರು ಹಳ್ಳಿಗಳಿಂದ ರೈತರು ಅಂಬಾಸದನದಲ್ಲಿ ಕಿಕ್ಕಿರಿದು ಸೇರಿದ್ದರು. ಶಿವಮೊಗ್ಗ, ದ.ಕ. ಮತ್ತು ಉ.ಕ. ಜಿಲ್ಲೆಗಳ ಎಸ್ಪಿಗಳೂ ಹಾಜರಿದ್ದರು. ಡಿ.ಐ.ಜಿ. ರೇವಣಸಿದ್ಧಯ್ಯ ಸ್ವಾಗತಿಸಿ, ಚಿಕ್ಕಮಗಳೂರು ಎಸ್ಪಿ ಎಸ್.ಎಸ್. ಪಾವಟೆ ವಂದಿಸಿದರು.

ಶುದ್ಧ ನೀರು ಪೂರೈಸದೆ ನಲ್ಲಿಗೆ ಮೀಟರ್ ಅಳವಡಿಸಲು ಮಾತೃಮಂಡಳಿ ವಿರೋಧ

ಕೊಪ್ಪ: ಇಲ್ಲಿನ ಪುರಸಭೆ ವ್ಯಾಪ್ತಿಯಲ್ಲಿ ಮನೆಗಳ ನಲ್ಲಿಗಳಿಗೆ ಮೀಟರ್ ಅಳವಡಿಸಲು ಉದ್ದೇಶಿಸಿರುವ ಕ್ರಮವನ್ನು ಪ್ರಬೋಧಿನಿ ಮಾತೃಮಂಡಳಿ ಮತ್ತೊಮ್ಮೆ ವಿರೋಧಿಸಿದೆ.

ಪುರಸಭೆಯ ಆದಾಯ ಹೆಚ್ಚಿಸುವ ದೃಷ್ಟಿಯಿಂದ ನಲ್ಲಿಗಳಿಗೆ ಮೀಟರ್ ಅಳವಡಿಸುವುದು ಯುಕ್ತವಾದುದಾದರೂ ಅದಕ್ಕೆ ಮೊದಲು ಶುದ್ಧೀಕರಿಸಿದ ನೀರನ್ನು ಪೂರೈಸಬೇಕು ಹಾಗೂ ಸರದಿ ಪ್ರಕಾರ ದಿನಕ್ಕೆ ಕನಿಷ್ಠ ಎರಡು ಸಲವಾದರೂ ನೀರು ಬಿಡಬೇಕು ಎಂದು ಮಾತೃ ಮಂಡಳಿ ಆಗ್ರಹಿಸಿದೆ.

ನೀರಿನ ಬಳಕೆಗೆ ವಿಧಿಸಲು ಉದ್ದೇಶಿಸಿರುವ ದರಗಳ ಬಗ್ಗೆಯೂ ವಿರೋಧಿಸಿರುವ ಮಂಡಳಿ, 20,000 ಲೀಟರ್‌ವರೆಗೆ ಪ್ರತಿ 1 ಸಾವಿರ ಲೀ.ಗೆ 25 ಪೈಸೆ, ನಂತರದ 30 ಸಾವಿರ ಲೀ. ಗೆ 40 ಪೈಸೆ, ಅದಕ್ಕಿಂತ ಹೆಚ್ಚಿನದಕ್ಕೆ 1000 ಲೀ. ಗೆ 75 ಪೈಸೆ ವಿಧಿಸಬೇಕೆಂದೂ, ನೀರು ಮತ್ತು ಮೀಟರ್ ಎರಡಕ್ಕೂ ಒಟ್ಟಿಗೆ 50 ರೂ. ಮಾತ್ರ ಠೇವಣಿ ನಿಗದಿಪಡಿಸಬೇಕೆಂದೂ ಒತ್ತಾಯಿಸಿದೆ.

ಈಗ ಪೂರೈಸುತ್ತಿರುವ ನೀರಾದರೂ ಬೇಸಿಗೆಯಷ್ಟಲ್ಲದಿದ್ದರೂ ಇದೂ ಕೂಡ ಸಾಕಷ್ಟು ಅಶುದ್ಧ ಮತ್ತು ರೋಗಕಾರಕವಾಗಿದೆಯೆಂಬ ಇಲ್ಲಿನ ವೈದ್ಯರುಗಳ ಸಾಮೂಹಿಕ ಅಭಿಪ್ರಾಯವನ್ನು ಮಂಡಳಿ ಪುರಸಭೆಗೆ ಹಾಗೂ ಜಿಲ್ಲಾ ಆರೋಗ್ಯಾಧಿಕಾರಿ ಮತ್ತು ನಗರಾಡಳಿತ ಸಚಿವರುಗಳ ಗಮನಕ್ಕೆ ತಂದಿದೆ.

ಹೊಸ ಶಾಲೆ ಪ್ರಾರಂಭ

ಕಿಗ್ಗ: ಇಲ್ಲಿಗೆ ಸಮೀಪದ ಮಾಗೋಡಿನಲ್ಲಿ ನೂತನ ಕಿರಿಯ ಪ್ರಾಥಮಿಕ ಶಾಲೆಯ ಉದ್ಘಾಟನೆ ಜು. 22 ರಂದು ಹುಲ್ಸೆ ಸುಬ್ಬಣ್ಣ ಅವರಿಂದ ನಡೆಯಿತು. ಚಟ್ಟುಣಿ ತಿಮ್ಮೇನಾಯ್ಕರು ಅಧ್ಯಕ್ಷತೆ ವಹಿಸಿದ್ದು, ಮಾಗೋಡು ಚಿನ್ನಯ್ಯ ಗೌಡ ಮತ್ತು ಎ. ಎ. ರಾಜಶೇಖರ ಹೆಗ್ಡೆ ಮುಖ್ಯ ಅತಿಥಿಗಳಾಗಿದ್ದರು. ಊರಿನ ಪೋಷಕವರ್ಗದವರೆಲ್ಲರೂ ಸಭೆಯಲ್ಲಿ ಹಾಜರಿದ್ದರು.

ಜೆ.ಎಸ್. ನಾಗಪ್ಪ ನಾಯ್ಕ ಸ್ವಾಗತಿಸಿ, . ಸುಬ್ರಮಣ್ಯ ವಂದಿಸಿದರು.

ಅಕ್ರಮ ನಾಟಾ ವಶ

ಕೊಪ್ಪ: ನಾರ್ವೆಗೆ ಸಮೀಪ ಜಮೀನು ಕೆ ಪಕ್ಕದ ಸರ್ಕಾರಿ ಜಾಗದ ಒಂದು ಅಬ ಯಲ್ಲಿ 15 ಸಾವಿರ ರೂ. ಬೆಲೆಬಾಳುವ ಬ್ಬಲಸು, ಕಾಯಿ ಧೂಪ ಮತ್ತು ಕಾಡು ಜಾತಿಯ ಸುಮಾರು 5 ಘನ ಮೀಟರ್ ಕ್ರಮ ನಾಟಾವನ್ನು ಜು. 20 ರಂದು ಕೊಪ್ಪದ ಎ.ಸಿ.ಎಫ್. ಮತ್ತು ಸಂಚಾರಿ ದಳದವರು ಪತ್ತೆ ಹಚ್ಚಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿದ್ದಾರೆ. ಇದರ ಆರೋಪಿಗಳು ಯಾರೆಂದು ಇನ್ನೂ ಪತ್ತೆಯಾಗಿಲ್ಲ. ತನಿಖೆ ಮುಂದುವರಿದಿದೆ.

ಏಲಕ್ಕಿ: ಸಹಾಯಧನಕ್ಕೆ ಗಡುವು ವಿಸ್ತರಣೆ

ಏಲಕ್ಕಿ ಮಂಡಳಿಯ ಕ್ಷೇತ್ರ ಕಚೇರಿಗಳಲ್ಲಿ ಏಲಕ್ಕಿ ಮರುನೆಡುವಿಕೆಗೆ ಸಹಾಯಧನವನ್ನು ಪಡೆಯಲು ಬೆಳೆಗಾರರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಏಲಕ್ಕಿ ಬೆಳೆಗಾರರು ಭರ್ತಿಮಾಡಿದ ಅರ್ಜಿಗಳನ್ನು 31-7-85 ರವರೆಗೆ ತಮ್ಮ ಹತ್ತಿರದ ಏಲಕ್ಕಿ ಮಂಡಳಿಯ ಕಛೇರಿಗಳಲ್ಲಿ ಸಲ್ಲಿಸಬಹುದೆಂದು ತಿಳಿಸಲಾಗಿದೆ.

ಕೊಪ್ಪ ನ.ರಾ. ಪುರಗಳಿಂದ ಹಾಲನ್ನು ಶಿವಮೊಗ್ಗಕ್ಕೆ ಸಾಗಿಸಲು ಒತ್ತಾಯ

ಕೊಪ್ಪ: ನರಸಿಂಹರಾಜಪುರ, ಕೊಪ್ಪ ಭಾಗಗಳಿಂದ ಸಂಗ್ರಹವಾಗುವ ಹಾಲನ್ನು ಈಗಿನಂತೆ ಹಾಸನ ಡೈರಿಗೆ ಸಾಗಿಸುವ ಬದಲು ಶಿವಮೊಗ್ಗದ ಕೆ.ಡಿ.ಡಿ.ಸಿ. ಘಟಕಕ್ಕೆ ಒಯ್ಯುವ ವ್ಯವಸ್ಥೆ ಆಗಬೇಕೆಂದು ಈ ಭಾಗದ ಹಾಲು ಉತ್ಪಾದಕರು ಅಪೇಕ್ಷಿಸಿದ್ದಾರೆ.

ಈಗಿನಂತೆ ಇಲ್ಲಿ ಸಂಗ್ರಹಿಸಿದ ಹಾಲನ್ನು ಬಾಳೆಹೊನ್ನೂರಿನ ಚಿಲ್ಲಿಂಗ್ ಪ್ಲಾಂಟ್‌ನಲ್ಲಿ ಒಂದು ದಿನ ಶೇಖರಿಸಿಟ್ಟು ನಂತರ ಹಾಸನಕ್ಕೆ ಸಾಗಿಸಲಾಗುತ್ತಿದೆ. ಇದರಿಂದಾಗಿ ಹಾಲಿನ ಬಾಳಿಕೆ ಕಮ್ಮಿಯಾಗುತ್ತಿದೆ. ಒಂದು ವೇಳೆ ನೇರವಾಗಿ ಹಾಸನಕ್ಕೇ ಸಾಗಿಸಿದರೂ ಕನಿಷ್ಠ 5 ಗಂಟೆ ಕಾಲ ಬೇಕು.

ಅದರ ಬದಲು ಇಲ್ಲಿಂದ ಶಿವಮೊಗ್ಗದ ಕೆ.ಡಿ.ಡಿ.ಸಿ. ಘಟಕಕ್ಕೆ ಒಯ್ಯುವುದಾದರೆ ಕೇವಲ 2 ಗಂಟೆ ಸಾಕು. ಹಾಲನ್ನು ಶೈತ್ಯೀಕರಿಸದೆ ಸೀದಾ ಸಂಸ್ಕರಣಕ್ಕೆ ಒಯ್ಯಲು ಸಾಧ್ಯ. ಈಗಾಗಲೇ ಶಿವಮೊಗ್ಗದ ಮಿಲ್ಕ್ ವ್ಯಾನ್ ಉಂಬ್ಳೆಬೈಲಿನವರೆಗೂ ಬರುತ್ತಿದ್ದು, ಅಲ್ಲಿಂದ ಇನ್ನು ಹೆಚ್ಚೆಂದರೆ ಒಂದು-ಒಂದೂವರೆ ಗಂಟೆಯೊಳಗೆ ಕೊಪ್ಪಕ್ಕೆ ಬರಬಹುದು.

ಹೀಗೆ ಮಾಡುವುದರಿಂದ ಕೊಪ್ಪದಲ್ಲೊಂದು ಚಿಲ್ಲಿಂಗ್ ಪ್ಲಾಂಟಿನ ಅಗತ್ಯವನ್ನೇ ನಿವಾರಿಸಬಹುದಲ್ಲದೆ, ಹಾಲು ಉತ್ಪಾದಕರಿಗೆ ಅನುಕೂಲ್ಯವಾದ ಮಾರುಕಟ್ಟೆಯ ಸೌಲಭ್ಯ ದೊರಕಿದಂತಾಗುತ್ತದೆ. ಆದ್ದರಿಂದ ಕೆಡಿಡಿಸಿಯವರ ರೀಜನ್/ಡಿವಿಜನ್ ಇತ್ಯಾದಿ ನಿಯಮಗಳೇನಿದ್ದರೂ ಅವನ್ನೆಲ್ಲ ಸಡಿಲಿಸಿ ಈ ಮೇಲಿನಂತೆ ವ್ಯವಸ್ಥೆ ಮಾಡಬೇಕು ಎಂದು ಉತ್ಪಾದಕರ ಪರವಾಗಿ ಇಲ್ಲಿನ ಒಬ್ಬ ಪ್ರಮುಖ ಹಾಲು ಉತ್ಪಾದಕರಾದ ಎಂ. ಆರ್. ಕಣ್ಣನ್ ಒತ್ತಾಯಿಸಿದ್ದಾರೆ.

ಹಾಗೆಯೇ, ಈ ಸ್ಥಳಗಳಲ್ಲಿ ಉತ್ಪಾದಕರ ಸಂಘಗಳನ್ನೂ ಸಹ ಕೆ. ಡಿ. ಡಿ. ಸಿ. ಯವರೇ ಸಂಘಟಿಸಬೇಕು. (ಖಾಸಗಿಯವರಿಗೆ ಅನುಭವ ಇರುವುದಿಲ್ಲವಾದ್ದರಿಂದ ಕಷ್ಟವಾಗುತ್ತದೆ.) ಹೀಗೆ ಉತ್ಪಾದಕರ ಸಂಘಟನೆ ಮತ್ತು ಸುಸೂತ್ರವಾದ ಮಾರುಕಟ್ಟೆಯ ಏರ್ಪಾಟು– ಇವುಗಳಿಂದ ಹೈನುಗಾರಿಕೆಗೆ ವಿಪುಲ ಅವಕಾಶವಿರುವ ಈ ಭಾಗದಲ್ಲಿ ಅದು ತೀವ್ರವಾಗಿ ಅಭಿವೃದ್ಧಿ ಹೊಂದುವುದರಲ್ಲಿ ಸಂಶಯವಿಲ್ಲ ಎಂದು ಕಣ್ಣನ್ ಅಭಿಪ್ರಾಯಪಡುತ್ತಾರೆ. ಅಧಿಕಾರಿಗಳು ತುರ್ತಾಗಿ ಈ ಕಡೆ ಗಮನ ನೀಡಬೇಕೆಂದು ಅವರು ಒತ್ತಾಯಿಸಿದ್ದಾರೆ.

ಭತ್ತದ ಬೆಳೆಗೆ ವಿಮಾ ಯೋಜನೆ

ಕೊಪ್ಪ: 1985-86 ನೆಯ ಸಾಲಿನಲ್ಲಿ ಕೊಪ್ಪ ತಾಲ್ಲೂಕಿನಲ್ಲಿ ಭತ್ತದ ಬೆಳೆಗೆ "ಬೆಳೆ ವಿಮಾ ಯೋಜನೆ" ಜಾರಿಯಲ್ಲಿದ್ದು, ಬೆಳೆಗಾರರು ಈ ಸೌಲಭ್ಯವನ್ನು ಜಿಲ್ಲಾ ಸಹಕಾರ ಬ್ಯಾಂಕ್, ವ್ಯವಸಾಯ ಸೇವಾ ಸಹಕಾರ ಸಂಘ ಸಂಸ್ಥೆಗಳು ಅಥವಾ ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಪಡೆಯಬಹುದು. ವಿಮೆಯ ಪ್ರೀಮಿಯಂನ್ನು ಸಾಲ ಪಡೆಯುವ ಹಣದಲ್ಲಿಯೇ ಸಾಲ ಕೊಡುವ ಸಂಸ್ಥೆಗಳು ರೈತರ ಪರವಾಗಿ ವಿಮಾ ಸಂಸ್ಥೆಗೆ ಕಟ್ಟುತ್ತಾರೆ. ಸಣ್ಣ ಮತ್ತು ಅತಿಸಣ್ಣ ರೈತರಿಗೆ ವಿಮೆಯ ಪ್ರೀಮಿಯಂನಲ್ಲಿ ಶೇಕಡ 50 ರಷ್ಟು ರಿಯಾಯಿತಿ ದೊರೆಯಲಿದೆ.

ಇಂಥ ಉತ್ತಮ ಸೌಲಭ್ಯವನ್ನು ಹೆಚ್ಚಿನ ಸಂಖ್ಯೆಯಲ್ಲಿ ರೈತರು ಪಡೆಯಬೇಕೆಂದೂ, ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಅಥವಾ ಜಿಲ್ಲಾ ಸಹಕಾರ ಬ್ಯಾಂಕಿನ ಶಾಖೆಗಳು ಅಥವಾ ಕೃಷಿ ವಿಸ್ತರಣಾ ಕಾರ್ಯಕರ್ತರನ್ನು ಸಂಪರ್ಕಿಸಬಹುದು.

ಬೀಳ್ಕೊಡಿಗೆ

ಕೊಪ್ಪ: ಇಲ್ಲಿಂದ ವರ್ಗವಾಗಿರುವ ಸರ್ಕಲ್ ಇನ್ಸ್‌ಪೆಕ್ಟರ್ ಪಂಚಾಕ್ಷರಿ ಸ್ವಾಮಿ ಮತ್ತು ತೋಟಗಾರಿಕೆ ಸಹಾಯಕ ನಿರ್ದೇಶಕ ವಿಶ್ವನಾಥಯ್ಯ ಅವರುಗಳನ್ನು ಸನ್ಮಾನಿಸಿ ಬೀಳ್ಕೊಡುವ ಮತ್ತು ಹೊಸ ಸರ್ಕಲ್ ಇನ್ಸ್‌ಪೆಕ್ಟರ್ ಮಂಡಲ್ಕರ್ ಅವರನ್ನು ಸ್ವಾಗತಿಸುವ ಸಮಾರಂಭ ಇಲ್ಲಿ ಜು. 25 ರಂದು 'ನಾಗರಿಕ ಸಮಿತಿ' ಎಂಬ ಲಾಂಛನದಡಿ ನಡೆಯಿತು. ಪುರಸಭಾ ಉಪಾಧ್ಯಕ್ಷ ಎಸ್. ಆರ್. ನಾರಾಯಣ ಭಟ್ ಅಧ್ಯಕ್ಷತೆ ವಹಿಸಿದ್ದರು.

ಮಳಿಗೆ ಚಂದ್ರಶೇಖರ್, ಮೂಗ ಶ್ರೀನಿವಾಸ್, ಕೆಸವೆ ಶಾಂತಾರಾಂ, ಮೊಹಮದ್ ಸಾದಿಕ್, ರಾಮದಾಸ್ ಅವರುಗಳು ಹಾಗೂ ಸನ್ಮಾನಿತರುಗಳಿಬ್ಬರೂ ಮಾತನಾಡಿದರು. 'ನಾಗರೀಕ ಸಮಿತಿ' ಕಾರ್ಯದರ್ಶಿ ಗುಣವಂತೆ ಪರಮೇಶ್ವರ ಸ್ವಾಗತಿಸಿ, ಹಂಚಿಕೊಳಲು ಜೈಪ್ರಕಾಶ ವಂದಿಸಿದರು.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 25-7-1985

ಸರಕು: 2670 - 2740

ಬೆಟ್ಟೆ: 1960

ಗೊರಬಲು: 1400

ಜಿಲ್ಲೆಯಲ್ಲಿ ದರ್ಖಾಸ್ತುಗಳ ಸಮಗ್ರ ವಿಲೇವಾರಿಗೆ ಡಿ. ಸಿ. ಯೋಜನೆ

ಕಾನೂನುಗಳು ದಿನದಿನಕ್ಕೆ ಬದಲಾಗುತ್ತಿವೆ. ಅಕಸ್ಮಾತ್ ಮುಂದೊಂದು ದಿನ ಜಮೀನಿದ್ದವರಿಗೆ ಮತ್ತೆ ದರ್ಖಾಸ್ತು ಇಲ್ಲ ಎಂಬ ಕಾನೂನು ಬಂದು–ಗಿಂದರೆ ಅಂತ, ಉಪಯುಕ್ತವೋ ನಿರುಪಯುಕ್ತವೋ – ಈಗಲೇ ನಮ್ಮದೂಂತ ಒಂದಷ್ಟು ಜಾಗ ಮಾಡಿಕೊಂಡುಬಿಡಬೇಕು. ಇದು ಒಂದು ತೆರ.

ನಮ್ಮ ಕಾಲ ಪೂರ್ತಿ ಹಂಗಿನಲ್ಲೇ ಕಳೆಯಿತು. ಮಕ್ಕಳು–ಮರಿಗಳಾದರೂ ಹೊಟ್ಟೆ ತುಂಬ ಉಂಡು ಬದುಕಬೇಕು. ನಮಗೆ ಸ್ವಂತದ್ದೆಂದು ಒಂದು ಜೀವನಾಧಾರವಿಲ್ಲದೆ ಸರ್ಕಾರದ ಯಾವ ಸೌಲತ್ತು ಬಂದರೂ ಹೊಳೆಯಲ್ಲಿ ಹುಳಿ ಹಿಂಡಿದಂತಾಗುತ್ತದೆ. ಆದ್ದರಿಂದ ತರಿಯೋ ಖುಷ್ಕಿಯೋ ಒಂದೆರಡೆಕ್ರೆಯಾದರೂ ಜಾಗ ಮಾಡಿಕೊಳ್ಳಬೇಕು – ಎಂಬ ಪ್ರಜ್ಞೆ ಬೆಳೆಯುತ್ತಿರುವುದೊಂದು ಕಡೆ.

ಅಡಚಣೆಗಳ ಕ್ಯೂ

ಉಳ್ಳವರಿಗೆ ದರ್ಖಾಸ್ತಾಗುವುದು ಸುಲಭ—ನಿಬಂಧನೆಗೆ ಗೋಲಿಪಟ್ಟಾದರೂ ಸರಿ, ಅವನ್ನು ಕಣ್ಣು ಮುಚ್ಚಿಸಿಯಾದರೂ ಸರಿ. ಇಲ್ಲದವರಿಗೆ ಕಾನೂನು – ಸೌಲತ್ತುಗಳು ಅಂತ ಇದ್ದರೂ ದರ್ಖಾಸ್ತುಗಳು ಅಡ್ಡಿ-ಅಡಚಣೆಗಳ 'ಕ್ಯೂ'ವೇ ಇರುತ್ತೆ.

ಮಲೆನಾಡಿನ ಉದ್ದಗಲಕ್ಕೂ ದರ್ಖಾಸ್ತು ಅರ್ಜಿಗಳು ಕೊಳೆಯುತ್ತಿವೆ. ಹಲವಾರು ವರ್ಷಗಳಿಂದಲೂ ಸಹ. ಅವುಗಳಲ್ಲಿ ಬಡಬಗ್ಗರವೇ ಜಾಸ್ತಿ. ಅವುಗಳನ್ನೇ ಕಬಳಿಸಿ ಒತ್ತುವರಿಗಳೂ ಆಗುತ್ತಿವೆ, ದರ್ಖಾಸ್ತುಗಳೂ ಆಗುತ್ತಿವೆ. ಈ ಮಧ್ಯೆ ಚುನಾವಣೆಗಳದೊಂದು ಮುಗಿಯದ ಕಾಟ. ಚುನಾವಣೆ ಬಂತೆಂದರೆ ಎಲ್ಲ ಇಲಾಖೆಯಲ್ಲೂ ದಿನವಹಿ ಕೆಲಸಗಳು ಮೂರಾರು ತಿಂಗಳು ಕಾಲಾಂಶಕ್ಕಿಳಿಯುತ್ತವೆ. ಮೂರ್ನಾಲ್ಕು ಇಲಾಖೆ ದಾಟಬೇಕಾದ ಒಂದು ದರ್ಖಾಸ್ತಿಗೆ ಈ ಕಾಟದಿಂದ ಮುಕ್ತಿ ಎಂದು?

ಕಳೆದ ನವೆಂಬರ್‌ನಲ್ಲೇ ಶುರುವಾದ ಚುನಾವಣೆಗಳಸಾಲಿನಿಂದ ನಿಂತುಹೋದ ದರ್ಖಾಸ್ತು ಕೆಲಸಗಳು ಮತ್ತೆ ಮುಂದುವರಿದಂತೆ ಕಾಣುವುದಿಲ್ಲ. ಅಷ್ಟರಲ್ಲೇ **ಮತ್ತೆ ಚುನಾವಣೆಯ ಕಾರ್ಮೋಡಗಳು ಕವಿಯತೊಡಗಿವೆ!** ಜಿಲ್ಲಾ ಪರಿಷತ್ ವಿಧೇಯಕಕ್ಕೆ ರಾಷ್ಟ್ರಪತಿಗಳ ಸಹಿ ಬಿದ್ದಿದೆ. ಜನವರಿಗೋ ಫೆಬ್ರವರಿಗೋ ಚುನಾವಣೆಯಂತೆ. ಹಾಗಾದರೆ ಇನ್ನೂ ಆರೆಂಟು ತಿಂಗಳು ದರ್ಖಾಸ್ತು ರೆಕಾರ್ಡ್‌ಗಳಿಗೆ ಜೈಲುವಾಸವೇ ಗತಿಯೇ ?

ಈ ಹಿನ್ನೆಲೆಯಲ್ಲಿ ಮೊನ್ನೆ ಕೊಪ್ಪ ತಾ|| ಕಚೇರಿಯಲ್ಲಿ ನಮ್ಮ ಜಿಲ್ಲಾಧಿಕಾರಿ ಬಿ. ಪಾರ್ಥಸಾರಥಿಯವರನ್ನು 'ಮುಂಜಾವು' ಸಂದರ್ಶಿಸಿದಾಗ ಅವರು ದರ್ಖಾಸ್ತು ಬಗ್ಗೆ ಒಂದು ದೊಡ್ಡ ಚಿತ್ರವನ್ನೇ ಬಿಡಿಸಿದರು.

ಮರಮಾಲಿಕೆ

ಚುನಾವಣೆಗೆ ಮೊದಲು ಕೊಪ್ಪ ತಾ|| ನಲ್ಲಿ ಸುಮಾರು 5 ಸಾವಿರ ಎಕರೆಯಷ್ಟು ದರ್ಖಾಸ್ತು ಮಂಜೂರಾಗಿ ಮುಂದಿನ ಕ್ರಮಕ್ಕೆ ಹೋಗಿದೆ. ಇದರ ಪೈಕಿ ಸುಮಾರು 4,500 ಎಕರೆ ಭೂಹೀನ ರೈತರವೇ. ಆದರೆ **ಸದ್ಯಕ್ಕೆ ಸಾಗುವಳಿ ಚೀಟಿ ಕೊಡಲು ಸಾಧ್ಯವಿರುವಂಥದು 1251 ಎಕರೆ ಮಾತ್ರ. ಉಳಿದವಕ್ಕೆ ಮರಮಾಲಿಕೆ ವಗೈರೆ ಆಗಬೇಕು. ಈ 1251 ಎಕರೆಗೆ ಸಾಗುವಳಿ ಚೀಟಿ ಕೊಡುವ ಕೆಲಸ ಸದ್ಯವೇ ಆಗುತ್ತದೆ.**

ಮರಮಾಲಿಕೆ ಮತ್ತು ಪಕ್ಕಾ ಪೋಡ್‌ನದೇ ನಿಜವಾದ ಸಮಸ್ಯೆ. ಈವರೆಗಿನ ಕಾನೂನಿನಂತೆ 2000 ರೂ.ಗಿಂತ ಹೆಚ್ಚಿನ ಮೌಲ್ಯದ ಮರಗಳಿದ್ದರೆ ಅದಕ್ಕೆ ಅರಣ್ಯ ಇಲಾಖೆಯ ಮೂಲಕ ವಿಲೇವಾರಿ ಆಗಬೇಕು. ಆದರೆ ಈಗ ಕೇವಲ ಒಂದು ಮರಕ್ಕೇ ಅದಕ್ಕಿಂತ ಹೆಚ್ಚು ಬೆಲೆಯಿದೆ. ಅರಣ್ಯ ಇಲಾಖೆಯವರು ಟೆಂಡರ್ ಕರೆದು....ಎಲ್ಲ ಆಗಬೇಕಾದರೆ ಬಹಳ ಕಾಲ ಹೋಗುತ್ತದೆ.

ಈ ಸಮಸ್ಯೆ ನಿವಾರಿಸಲು ಎರಡು ಸಲಹೆಗಳನ್ನು ಸರ್ಕಾರದ ಮುಂದಿಡಲಾಗಿದೆ. ಒಂದು—2000 ರೂ. ಮಿತಿಯನ್ನು ಸಮರ್ಪಕವಾಗಿ ಹೆಚ್ಚಿಸಿ, ಮರಮಾಲಿಕೆಗೆ ಹೋಗುವ ಪ್ರಕರಣಗಳನ್ನು ಕಡಿಮೆಗೊಳಿಸುವುದು; ಎರಡು—ಮರಮಾಲಿಕೆ ಇಲ್ಲದೆಯೇ ಸಾಗುವಳಿ ಚೀಟಿಕೊಟ್ಟು, ಅದರಲ್ಲಿ ಆ ಜಾಗದಲ್ಲಿರುವ ನಾಟಾ ಮತ್ತಿತರ ರಕ್ಷಿಸಬೇಕಾದ ಮರಗಳ ಸಂಖ್ಯೆ, ಗಾತ್ರ, ಮೌಲ್ಯ ವಗೈರೆಯನ್ನು ಗುರುತು ಹಾಕಿ, ಅವನ್ನು ಕಾಯ್ದುಕೊಳ್ಳುವ ಜವಾಬ್ದಾರಿಯನ್ನು ದರ್ಖಾಸ್ತುದಾರನಿಗೆ ವಹಿಸುವುದು.

ಈ ವಿಚಾರವೊಂದು ಬಗೆಹರಿದರೆ ದರ್ಖಾಸ್ತು ವಿಲೇವಾರಿ ಶೀಘ್ರಗೊಳಿಸಲು ದಾರಿ ಸುಗಮವಾಗುತ್ತದೆ.

ಸರ್ವೆ: ಸಂಚಾರಿ ಘಟಕ ?

ಎರಡನೆಯದಾಗಿ ಸರ್ವೆ ಆಗಿ, ಹದ್ದುಬಸ್ತು ವಗೈರೆ ಆಗಬೇಕು. ಸರ್ವೆ ಇಲಾಖೆಯಲ್ಲಿರುವ ಸಿಬ್ಬಂದಿ ಈಗ್ಗೆ ಸಾಲುತ್ತಿಲ್ಲ. ಆದರ ಮೇಲೆ, ಹಿಂದೆಯೇ ಮಂಜೂರಾಗಿರುವ ಭೂಮಿಯ ಅಳತೆ–ಹದ್ದುಬಸ್ತು ಬೇರೆ ಬಾಕಿಯಿದೆ. ಜಿಲ್ಲೆಯಲ್ಲಿ ಇಂಥ 1923, ಕೊಪ್ಪ ತಾ||ನಲ್ಲಿ 981 ಪ್ರಕರಣಗಳು ಇವೆ. ಜೊತೆಗೆ ಮನೆದಳಕ್ಕೆ ಅಳತೆ, ಹಕ್ಕುಪತ್ರ ನೀಡಿಕೆ ಆಗಬೇಕು. (21.7.85 ರಂದು ಕೊಪ್ಪದಲ್ಲಿ 2300 ಹಕ್ಕುಪತ್ರದ ಕೆಲಸ ನಡೆಯಿತು.)

ಈ ಸಮಸ್ಯೆ ನಿವಾರಣೆಗಾಗಿ ಸದ್ಯ ಎಲ್ಲಾ ತಾಲ್ಲೂಕುಗಳಲ್ಲೂ ಇರುವ ದರ್ಖಾಸ್ತು ಮತ್ತಿತರ ಕೆಲಸಗಳ ಸರ್ವೆ ಪೂರೈಸಲು ಎಷ್ಟು ಸಿಬ್ಬಂದಿ ಬೇಕೆಂಬ ಅಧ್ಯಯನ, ಅಂದಾಜು ನಡೆಯುತ್ತಿದೆ. ಅಷ್ಟು ಜನರನ್ನು ಸರ್ಕಾರಿ ನೇಮಕಾತಿಯಿಂದ ಅಥವಾ ಸ್ಥಳೀಯರನ್ನು ನೇಮಿಸಿಕೊಂಡು ಒಂದು ಸಂಚಾರಿ ಸರ್ವೆ ದಳ ಸ್ಥಾಪಿಸಿ ಒಂದೊಂದೇ ತಾಲ್ಲೂಕಿನಲ್ಲಿ ಮುಗಿಸುತ್ತ ಬರುವ ಯೋಜನೆಯಿದೆ.

(ಮೂರನೇ ಪುಟಕ್ಕೆ)

ಮಲೆನಾಡಿಗೆ ಕೀರ್ತಿ ತಂದ ಎಂ. ಎಸ್. ಭಾರತಿ

ಕಾಲೇಜು ವಿದ್ಯಾರ್ಥಿಗಳನ್ನು ರಚನಾತ್ಮಕವಾಗಿ ಸಮುದಾಯ ಚಟುವಟಿಕೆಗಳಲ್ಲಿ ತೊಡಗಿಸುವ 'ರಾಷ್ಟ್ರೀಯ ಸೇವಾ ಯೋಜನೆ' ಇಂದು ಒಂದು ವಿಶ್ವವ್ಯಾಪಿ ಸಂಘಟನೆಯಂತೆಯೇ ಬೆಳೆದಿದೆ. ಇದರ ಅಂತರ ರಾಷ್ಟ್ರೀಯ ಶಿಬಿರವೊಂದನ್ನು ಈಚೆಗೆ ಆಂಧ್ರ ಪ್ರದೇಶದ ಕಾಳಹಸ್ತಿಯಲ್ಲಿ ವೆಂಕಟೇಶ್ವರ ವಿಶ್ವವಿದ್ಯಾಲಯದವರು ಕೇಂದ್ರ ಮತ್ತು ಆಂಧ್ರ ಸರ್ಕಾರಗಳ ನೆರವಿನಿಂದ ಏರ್ಪಡಿಸಿದ್ದರು.

ಈ ಶಿಬಿರದಲ್ಲಿ ನಮ್ಮ ಶೃಂಗೇರಿಯ ಜೆ.ಸಿ.ಬಿ.ಎಂ. ಕಾಲೇಜಿನಿಂದ ಭಾಗವಹಿಸಿದ್ದ ಕು|| ಎಂ.ಎಸ್. ಭಾರತಿ ಅಲ್ಲಿ ನಡೆದ ಅಂತರ ರಾಷ್ಟ್ರೀಯ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ತಮ್ಮ ಭರತನಾಟ್ಯಕ್ಕೆ ಮೊದಲ ಬಹುಮಾನ ಗಳಿಸಿದ್ದಾರೆ.

ಕು|| ಭಾರತಿ ಶೃಂಗೇರಿಯ ಗಣ್ಯ ಜವಳಿ ವರ್ತಕರಾದ ಸುಬ್ರಾಯ ಪಂಡಿತರ ಮಗಳು. ಕಾಲೇಜಿನಲ್ಲಿ ಎರಡನೇ ಬಿ.ಕಾಂ. ವಿದ್ಯಾರ್ಥಿನಿ.

ಈಕೆಯ ಈ ಸಾಧನೆ ಕಾಲೇಜಿಗೆ ಮಾತ್ರವಲ್ಲ, ನಮ್ಮ ಮಲೆನಾಡಿಗೇ ಹೆಮ್ಮೆ ತಂದ ವಿಷಯ. —ರಮೇಶ್ ಎಸ್.ವಿ.

ಧರ್ಮಶಾಸ್ತ್ರದ ಬಗ್ಗೆ ಮಠಾಧೀಶರ ಒಂದು ಸತ್ಯದರ್ಶನ

ಮೊನ್ನೆ ಹರಿಹರಪುರ ಪೋಲೀಸ್ ಠಾಣೆ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಹರಿಹರಪುರ ಮಠಾಧೀಶರು, ಒಬ್ಬ ಮಠಾಧೀಶರಿಗೂ ಈ ಸಮಾರಂಭಕ್ಕೂ ಏನು ಸಂಬಂಧ ಎಂಬುದನ್ನು ಹೀಗೆ ವಿಶ್ಲೇಶಿಸಿದರು— (ಈ ಸಮಾರಂಭದಲ್ಲಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳೂ ಹಾಜರಿದ್ದರು.)

ಪ್ರಾಣಿಗಳಿಂದ ಮನುಷ್ಯ ವಿಕಾಸ

ಬಹಳ ಹಿಂದೆ ಪ್ರಾಣಿಗಳಿಂದ ಮಾರ್ಪಾಡಾಗಿ ಮನುಷ್ಯಕುಲ ಭೂಮಿಯಲ್ಲಿ ಉದಿಸಿದಾಗ ಅವರು ಮೃಗಗಳಂತೆಯೇ ಕಚ್ಚಾಡಿಕೊಂಡು ಪರಸ್ಪರ ಹಿಂಸೆಯಲ್ಲಿ ನಿರತರಾಗಿದ್ದರು. ಆಗ ಮೊಟ್ಟಮೊದಲ ಬಾರಿಗೆ ಮನುವು ಸಮಾಜದಲ್ಲಿ ಶಾಂತಿನೆಲೆಸುವ ಬಗ್ಗೆ ಹಾಗೂ ಎಲ್ಲರಿಗೂ ಸಮಾನ ಸುಖ, ಅಧಿಕಾರಗಳಿಗಾಗಿ ನೀತಿ ನಿಯಮಗಳನ್ನು ರಚಿಸಿದನು. ಯಾರ್ಯಾರು ಏನೇನು ಮಾಡಬೇಕು, ಏನೇನು ಮಾಡಬಾರದು, ಯಾವ್ಯಾವ ಅಪರಾಧಕ್ಕೆ ಏನೇನು ಶಿಕ್ಷೆ ಎಂಬುದನ್ನೆಲ್ಲ ಆತ ನಿರ್ಣಯಿಸಿದ.

ಹಾಗೆಯೇ ಅಪರಾಧಗಳನ್ನು ಪತ್ತೆ ಮಾಡುವ ಈಗಿನ ಪೋಲೀಸಿನಂಥ ಪಡೆಯನ್ನೂ, ಅಪರಾಧವನ್ನು ವಿಮರ್ಶಿಸಿ ದಂಡ–ಶಿಕ್ಷೆ ವಿಧಿಸುವ ನ್ಯಾಯಸ್ಥಾನಗಳನ್ನೂ ಆತನೇ ರೂಪಿಸಿದ.

ಇದು ಅಪರಾಧ ನಡೆದಾಗಿನ ಕ್ರಮವಾಯಿತು. ಆದರೆ ಅಪರಾಧವೇ ನಡೆಯದಂತೆ ಮನುಷ್ಯರ ಮನಸ್ಸನ್ನೂ ತಿದ್ದಬೇಕು. ಆ ಕೆಲಸವನ್ನು ನಮಗೆ–ಧರ್ಮಗುರುಗಳಿಗೆ ವಹಿಸಿದ. ಯಾವುದು ನ್ಯಾಯ, ಯಾವುದು ಯುಕ್ತ, ಯಾವುದು ಹೀನ ಎಂಬುದನ್ನೆಲ್ಲ ಜನರಿಗೆ ವಿವರಿಸಿ, ಅವರಲ್ಲಿ ಹಿಂಸ್ರ ಬುದ್ಧಿಯನ್ನು ಹೋಗಲಾಡಿಸಿ ಧರ್ಮ ಬುದ್ಧಿಯನ್ನು ಬೆಳೆಸುವುದು ನಮ್ಮ ಕೆಲಸವಾಯಿತು.

ಆದ್ದರಿಂದ ಇಲ್ಲಿ ಪೋಲೀಸ್ ವರಿಷ್ಠರು ಮತ್ತು ಜಿಲ್ಲಾ ನ್ಯಾಯಾಧೀಶರ (ಜಿಲ್ಲಾಧಿಕಾರಿ) ಜೊತೆ ನಾವೂ ಇರುವುದು ನನಗೆ ಸೂಕ್ತವಾಗಿ ಕಾಣುತ್ತದೆ ಎಂದು ಸ್ವಾಮೀಜಿ ವಿವರಿಸಿದರು.

ಪರಲೋಕದ ಭಯ

ಅವರು ಮುಂದುವರಿದು, ಹೀಗೆ ಧರ್ಮ ಜೋಧೆ ಮಾಡಿಯೂ ಮನುಷ್ಯ ಅಪರಾಧ ಪ್ರವೃತ್ತಿ ಬಿಡದಿರಬಹುದು. ಉದಾಹರಣೆಗೆ ಒಂದು ಮಗು ರಸ್ತೆಗೆ ಹೋಗಬಾರದೆಂದು ನಿಮ್ಮ ಪ್ರಯತ್ನ. ಅದಕ್ಕಾಗಿ ಅವನಿಗೆ ನಾಯಿ, ಹಸು, ಲಾರಿ–ಬಸ್ಸು, ಪೋಲೀಸ್ ಮುಂತಾಗಿ ನೀವು ಏನೇನು ಹೇಳಿದರೂ ಕೇಳದಿದ್ದಾಗ ನೀವೇನು ಮಾಡುತ್ತೀರಿ? ಕೊನೆಯ ಅಸ್ತ್ರವಾಗಿ ಗುಮ್ಮದ ಹೆದರಿಕೆಯನ್ನು ಅವನ ಮುಂದಿಡುತ್ತೀರಿ. ಗುಮ್ಮ ಇಲ್ಲವೆಂದು ನಿಮಗೆ ಗೊತ್ತು. ಆದರೂ ಹಾಗೊಂದು ಸುಳ್ಳು ಹೇಳಿಯಾದರೂ ಅವನನ್ನು ತಡೆಯುತ್ತೀರಿ.

ಹಾಗೆಯೇ ಈ ಲೋಕದ ನಿಯಮ ಅಥವಾ ಶಿಕ್ಷೆಗಳಿಗೆ ಬಗ್ಗದವರಿಗೆ ಭಯ ಹುಟ್ಟಿಸಲು, ಅವರು ಅಪರಾಧ ಮಾಡದಂತೆ ತಡೆಯಲು ಇಲ್ಲಿನ ಅಪರಾಧಕ್ಕೆ ಪರಲೋಕದಲ್ಲಿ ಶಿಕ್ಷೆ ವಿಧಿಸುವ ಬಗ್ಗೆಯೂ ಮನು ಬರೆದಿಟ್ಟ. ನಾವು ಅದೆಲ್ಲ ಸುಳ್ಳೆಂದು ಗೊತ್ತಿದ್ದರೂ ಅದನ್ನು ಜನರಿಗೆ ಹೇಳುತ್ತೇವೆ. ನೀವು ಅದಕ್ಕೆ ಎಷ್ಟು ಹೆದರುತ್ತೀರೋ ಎಷ್ಟು ನಂಬುತ್ತೀರೋ ಅದು ನಿಮಗೆ ಬಿಟ್ಟದ್ದು. "ಹಾಗಾದರೆ ನೀವು ಸುಳ್ಳು ಹೇಳುತ್ತೀರಲ್ಲ?" ಎಂದು ನೀವು ಕೇಳಬಹುದು. ಅದಕ್ಕೂ ನಮ್ಮ ಬಳಿ ಉತ್ತರವಿದೆ. ಅದೆಲ್ಲ ಸುಳ್ಳೆಂತಲೂ ನಾವು ಹೇಳುವುದಿಲ್ಲ ಎಂದರು.

ನಮ್ಮ ಧರ್ಮ ಶಾಸ್ತ್ರಗಳ ಬಗೆಗೆ ಇಂಥ ಸತ್ಯಸಂಗತಿಯನ್ನು ಸಾಮಾನ್ಯವಾಗಿ ಮಠಾಧೀಶರೊಬ್ಬರು ಹೇಳುವುದು ಬಹಳ ಅಸಂಭವವಾದ್ದರಿಂದ ಇದೊಂದು ವಿಶಿಷ್ಟ ಸಂದರ್ಭವಾಯಿತು.

ಶಿಕ್ಷಣದಲ್ಲಿ ನೀತಿಪಾಠ ಇಲ್ಲ

ಇಂದಿನ ಶಿಕ್ಷಣದ ಬಗ್ಗೆಯೂ ತಮ್ಮ ಎಂದಿನ ಅಸಮಾಧಾನ ಸೂಚಿಸಿದ ಸ್ವಾಮೀಜಿ, ಸಮಾಜದಲ್ಲಿ ಇಂದು ಇಷ್ಟೊಂದು ಅಶಾಂತಿ, ಅರಾಜಕತೆ, ಕ್ರೌರ್ಯ ತುಂಬಿರುವುದಕ್ಕೆ ವಿದ್ಯಾಭ್ಯಾಸದಲ್ಲಿ ಮಕ್ಕಳಿಗೆ ನೀತಿಪಾಠ ಕಲಿಸದಿರುವುದೇ ಕಾರಣ. ಹಿಂದೆಲ್ಲ ಶಾಲಾ ಪಠ್ಯಗಳಲ್ಲಿ ಪ್ರತಿಯೊಂದು ಪಾಠದ ಕೊನೆಗೂ 'ನೀತಿ' ಎಂಬ ಭಾಗವೊಂದಿರುತ್ತಿತ್ತು. ಈಗ ಅದೆಲ್ಲ ಹೋಗಿ ಬರೀ "ಅವನು ಬಸವ, ಅವಳು ಕಮಲ...." ಆಗಿದೆ ಎಂದರು.

(ಮೂರನೇ ಪುಟಕ್ಕೆ)

ಎರಡು ಪತ್ರಗಳು

1. ಪ್ರಯಾಣಿಕರ ತಾಳ್ಮೆ ಪರೀಕ್ಷಿಸುವ ಬಸ್ಸು

ಶಂಕರ್ ಸಾರಿಗೆ ಸಂಸ್ಥೆಯವರ ಬಸ್ಸುಗಳಲ್ಲಿ ಒಂದಾದ ಟೌನ್ ಸರ್ವಿಸ್ (ಎಂವೈಸಿ 4174) ಇದು ತೀರ್ಥಹಳ್ಳಿ ಮತ್ತು ಕೊಪ್ಪದ ನಡುವೆ ಪ್ರಯಾಣಿಸುವ ಪ್ರಯಾಣಿಕರ ತಾಳ್ಮೆ ಪರೀಕ್ಷಿಸುತ್ತಿದೆ. ಮಳೆಗಾಲ ಪ್ರಾರಂಭವಾದ ಸಮಯದಲ್ಲಿ, ಮಳೆ ನೀರೆಲ್ಲಾ ಒಳಗೇ ಬೀಳುತ್ತಿದ್ದುದು ಮಳೆ ನಿಂತರೂ ತೊಟ್ಟಿಕ್ಕುತ್ತಿತ್ತು. ದಿನಂಪ್ರತಿ ಪ್ರಯಾಣಿಕರ ಬೈಗಳು ತಿಂದ ಚಾಲಕ-ನಿರ್ವಾಹಕರು ಕಂಪನಿಗೆ ಸುದ್ದಿ ಮುಟ್ಟಿಸಿ ಅಂತೂ ಹೊಸತೊಂದು ಟಾರ್ಪಲ್ ಹೊದಿಕೆ ಹಾಕಿಸಿಕೊಂಡಿತು ಈ ಬಸ್ಸು! ಅದರಲ್ಲಿರುವ ಕಂಬಗಳೆಲ್ಲಾ ತುಕ್ಕು ಹಿಡಿದು ಬಟ್ಟೆಬರೆಗೆಲ್ಲಾ ಹಿಡಿಯುತ್ತದೆ. ಪ್ರಯಾಣ ಮಾಡಿದ್ದಕ್ಕೆ ನೆನಪಿನ ಕಾಣಿಕೆ! ಸೀಟುಗಳು ಅಲ್ಲಲ್ಲಿ ಹರಿದಿದ್ದು ಮೊಳೆಗಳು ಹೊರಬಂದಿವೆ. ಕೆಲವು ಸೀಟುಗಳು ಮುಟ್ಟಿದರೆ ಕಚ್ಚುತ್ತವೆ ಯಾ ಚುಚ್ಚುತ್ತವೆ.

ಈ ಹಿಂದೆ ಅತೀ 'ಕಂಡಂ' ಬಸ್ಸೊಂದು ಈ ರಸ್ತೆಯಲ್ಲಿ ಟೌನ್ ಸರ್ವೀಸ್ ಆಗಿ ಓಡುತ್ತಿತ್ತು. ಈಗ ಅದನ್ನು ಬದಲಿಸಿ ಅದರ ಸ್ಥಳದಲ್ಲಿ ಇನ್ನೊಂದು "ಕಂಡಂ" ಬಸ್ಸು ಓಡಿಸುತ್ತಿರುವರು. ಎಂದೋ ಒಂದು ದಿನ ಪ್ರಯಾಣಿಕರ ಕೋಪಕ್ಕೆ ತುತ್ತಾಗಿ ಈ ಬಸ್ಸು ಹಾಳಾದರೆ ಆಶ್ಚರ್ಯಪಡಬೇಕಾಗಿಲ್ಲ.

ಒಂದು ಮಾತು: ಈಗಾಗಲೇ ಈ ಬಗ್ಗೆ ಪ್ರಯಾಣಿಕರ ಮನವಿಯೊಂದನ್ನು ಸಾರಿಗೆ ಸಂಸ್ಥೆಗೆ ಕಳಿಸಿರುತ್ತದೆ ಮತ್ತೊಮ್ಮೆ "ಮುಂಜಾವು" ಮೂಲಕ ನೆನಪಿಸುತ್ತೇನೆ. ದಯಮಾಡಿ ವ್ಯವಸ್ಥಿತ ಬಸ್ಸನ್ನು ಟೌನ್ ಸರ್ವೀಸ್ ಆಗಿ ಓಡಿಸಿ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆ ತಪ್ಪಿಸುವರೆ?

—ಹೊಸ್ಮನೆ ರಮೇಶ್.

....

2. ಗಡಿಕಲ್ ದೊಡ್ಡಿ

ಗಡೀಕಲ್ಲಿನಲ್ಲಿ ಒಂದು ಸುರಕ್ಷಿತ ಅನಿಸಿಕೊಂಡ ಜಾನುವಾರು ದೊಡ್ಡಿಯಿದೆ. ಇಲ್ಲಿ ಕಟ್ಟಿದ ಜಾನುವಾರು ಒಂದಕ್ಕೆ ಒಂದು ದಿನಕ್ಕೆ ಒಂದು ಕಟ್ಟು ಹುಲ್ಲು ಹಾಕುತ್ತಾರೆ. ದಿನಕ್ಕೊಂದು ಬಾರಿ ನೀರು ಕೊಡುತ್ತಾರೆ.

ಈಚೆಗೆ ಎರಡು ವಾರದ ಹಿಂದೆ ಒಂದು ಜೊತೆ ಹೂಟೆ ಎತ್ತುಗಳು ಈ ದೊಡ್ಡಿಗೆ ದಾಖಲಾಗಿವೆ. ವಾರಸುದಾರರಿಗೆ ಅರಿವಿಲ್ಲ! ದಿನದಿನಕ್ಕೆ ಹೊಟ್ಟೆಗೆ ಆಹಾರ ಸಾಲದೆ ಸೊರಗುತ್ತಿವೆ. 5–6 ದಿನ ಕೂಗುತ್ತಿದ್ದವು. ಈಗ್ಗೆ ಕೂಗಲು ಅಶಕ್ತವಾಗಿವೆ ಅನಿಸುತ್ತದೆ.

ದೊಡ್ಡಿಯ ಬಾಡಿಗೆ ಜಾಸ್ತಿ ಮಾಡಿ ಅವುಗಳಿಗೆ ಹೆಚ್ಚಿನ ಆಹಾರ ವ್ಯವಸ್ಥೆ ಮಾಡಿದರೆ ಮೂಕ ಪಶುಗಳು ಮಾಡುವ ರೋದನವಾದರೂ ಕಡಿಮೆಯಾಗಬಹುದು.

ಸಂಬಂಧಪಟ್ಟವರು ಗಮನಿಸಿಯಾರೆ?

—ಹೊಸ್ಮನೆ ರಮೇಶ್,
ಗಡಿಕಲ್.

ದರ್ಖಾಸ್ತು — ಸಮಗ್ರ ಯೋಜನೆ

(ಎರಡನೇ ಪುಟದಿಂದ)

ಹೇಗೂ ಚುನಾವಣೆ ಕಾವು ಏರುವುದು ನವೆಂಬರ್ ನಂತರವೇ. ಆದ್ದರಿಂದ ಇದೇ ಆಗಸ್ಟ್ ಕೊನೆಯೊಳಗೆ ಅರ್ಧದಷ್ಟು ಪ್ರಕರಣಗಳನ್ನು ಅಕ್ಟೋಬರ್ ಕೊನೆಯೊಳಗೆ ಪೂರ್ತಿಯನ್ನು ಮುಗಿಸುವ ಗುರಿ ಇಟ್ಟುಕೊಳ್ಳಲಾಗಿದೆ.

ಇದು ಜಿಲ್ಲಾಧಿಕಾರಿಗಳು ಯೋಜಿಸಿರುವುದರ ಸ್ಥೂಲ ಚಿತ್ರಣ.

ತಿಂಗಳ ಸಭೆ

ದಿನವಹಿ ಕೆಲಸಗಳ ನಿರ್ವಹಣೆಗೆ ಸಂಬಂಧಿಸಿದಂತೆ ವಾರಕ್ಕೊಮ್ಮೆ ರೆವಿನ್ಯೂ ಇನ್ಸ್ಪೆಕ್ಟರುಗಳು ಆಯಾ ಹೋಬಳಿಯಲ್ಲಿ ಸಭೆ ನಡೆಸುತ್ತಿದ್ದಾರೆ. ಇದನ್ನೇ ವಿಸ್ತರಿಸಿ, ತಿಂಗಳಲ್ಲಿ ಒಂದೊಂದು ದಿನ ಪ್ರತಿ ಹೋಬಳಿಯಲ್ಲೂ ತಾಲ್ಲೂಕಿನ ಎಲ್ಲ ಅಧಿಕಾರಿಗಳೂ ಹಾಜರಿದ್ದು ಅಲ್ಲಿ ಬರುವ ಅರ್ಜಿಗಳನ್ನು ಇತ್ಯರ್ಥಗೊಳಿಸುವ ಬಗ್ಗೆಯೂ ಜಿಲ್ಲಾಧಿಕಾರಿಗಳು ಆದೇಶ ನೀಡಿದ್ದಾರೆ.

ಏರಿದ ಸರಾಸರಿ

ಸಾಮಾನ್ಯವಾಗಿ ತಾ|| ಕಚೇರಿಯಲ್ಲಿ ಒಂದು ತಿಂಗಳಲ್ಲಿ 500 ಪ್ರಕರಣಗಳು ಇತ್ಯರ್ಥ ಕಾಣುತ್ತವೆ. ಚುನಾವಣೆ ಬಂತೆಂದರೆ ಇದು ಅರ್ಧಕ್ಕೆ ಇಳಿಯುತ್ತದೆ. ಆದರೆ ಕೊಪ್ಪ ತಾ|| ಕಚೇರಿ ತನಿಖೆಗೆ ಬರುವುದಾಗಿ ಒಂದು ತಿಂಗಳ ಮುಂಚೆಯೇ ತಿಳಿಸಿದ್ದಾಗ ಈ ಒಂದು ತಿಂಗಳಲ್ಲಿ 1200 ಪ್ರಕರಣಗಳು ಇತ್ಯರ್ಥವಾಗಿವೆ. ಇದನ್ನೇ ಸದಾ ಕಾಲದ ಸರಾಸರಿಯಾಗಿ ಉಳಿಸಿಕೊಳ್ಳಬೇಕೆಂದು ಆದೇಶಿಸಿರುವುದಾಗಿ ಜಿಲ್ಲಾಧಿಕಾರಿ ತಿಳಿಸಿದರು.

ಶುಲ್ಕದ ಬೋರ್ಡ್

21.7.85 ರ 'ಮುಂಜಾವು'ನಲ್ಲಿ ಪ್ರಕಟವಾದ 'ಹಿಂಬರಹಕ್ಕೂ ಫೀಸು' ಪರಿಸ್ಥಿತಿಯ ಕಡೆ ಜಿಲ್ಲಾಧಿಕಾರಿಗಳ ಗಮನಸೆಳೆದಾಗ, ಇದನ್ನು ನಿವಾರಿಸಲು ಎಲ್ಲಾ ಕಚೇರಿಗಳ ಪ್ರತಿ ವಿಭಾಗದಲ್ಲಿ ಅಲ್ಲಿ ನಡೆಯುವ ಕೆಲಸಗಳಿಗೆ ತಗಲುವ ಕ್ರಮಬದ್ಧ ಶುಲ್ಕ ಎಷ್ಟೆಂಬುದನ್ನು ತಿಳಿಸುವ ಬೋರ್ಡ್ ತೂಗುಹಾಕಲಾಗುತ್ತದೆ. ಅದಕ್ಕಿಂತ ಹೆಚ್ಚಿಗೆ ಅಥವಾ ಅದರ ಹೊರತಾದ 'ಶುಲ್ಕ'ಗಳನ್ನು ವಸೂಲಿ ಮಾಡಿದರೆ ತಹಸೀಲ್ದಾರರ ಗಮನಕ್ಕೆ ತರಬೇಕು. ಅಲ್ಲದೆ ಪಡೆದ ಪ್ರತೀ ಫೀಸಿಗೆ ರಸೀದಿ ಕೊಡಬೇಕು—ಹೀಗೆ ವ್ಯವಸ್ಥೆ ಮಾಡುವುದಾಗಿ ಡಿ.ಸಿ. ತಿಳಿಸಿದರು.

ಸತ್ಯದರ್ಶನ

(ಎರಡನೇ ಪುಟದಿಂದ)

ಇದಕ್ಕೆ ಸರಿಯಾಗಿ ಪೋಷಕರುಗಳೂ ಸಹ ತಮ್ಮ ಮಕ್ಕಳಿಗೆ ಶಿಸ್ತು, ನೀತಿಗಳನ್ನು ಕಲಿಸುವ ಬದಲು ಅವರ ಅಶಿಸ್ತು ಅನಾಚಾರಗಳಿಗೇ ಶಹಭಾಸ್ ಹೇಳುತ್ತಾರೆ. ಹೀಗಾದರೆ ಸಮಾಜ ಇನ್ನೇನಾಗಲು ಸಾಧ್ಯ? ಎಂದು ನೊಂದು ನುಡಿದರು.

ಶಿವಮೊಗ್ಗದಲ್ಲಿ ಅಡಿಕೆ ವ್ಯಾಪಾರ ಸ್ಥಗಿತ: ವರ್ತಕರ 'ತಂತ್ರ'?

ಮಲೆನಾಡಿನ ಆರ್ಥಿಕ ಬದುಕಿನ ಬೆನ್ನೆಲುಬಾದ ಅಡಿಕೆಗೆ ಪ್ರಮುಖ ಮಾರುಕಟ್ಟೆಯಾದ ಶಿವಮೊಗ್ಗದಲ್ಲಿ ಮಂಡಿ ವ್ಯಾಪಾರಿಗಳು ಜು. 20 ರಿಂದ ವ್ಯಾಪಾರ ನಿಲ್ಲಿಸಿದ್ದಾರೆ. 'ಅಡಿಕೆ ಬೆಲೆಯಲ್ಲಿ ಭಾರೀ ಕುಸಿತ ಮತ್ತು ಅಡಿಕೆ ಕೊಳ್ಳುವವರಿಲ್ಲದೆ ವಿಪರೀತ ದಾಸ್ತಾನು'– ಇವನ್ನು ಈ ವ್ಯಾಪಾರದ ಸ್ಥಗಿತಕ್ಕೆ ಕಾರಣವಾಗಿ ಕೊಡಲಾಗಿದೆ.

ಈ ಕುರಿತು 'ಮುಂಗಾರು' ದಿನಪತ್ರಿಕೆಯ 24.7.85 ರ ಸಂಚಿಕೆಯಲ್ಲಿ ಪ್ರಕಟವಾಗಿರುವ ವಿವರವಾದ ತನಿಖಾ ವರದಿಯನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ.

'ಮುಂಗಾರು'ಗೆ ಮತ್ತು ವರದಿಗಾರ ಜೆ. ಎ. ಪ್ರಸನ್ನ ಕುಮಾರ್‌ಗೆ ಕೃತಜ್ಞತೆಗಳು. —ಸಂ.

ಮಲೆನಾಡಿನ ಪ್ರಮುಖ ಭಾಗಗಳ ಆರ್ಥಿಕ ಬದುಕಿನ ಜೀವಾಳ ಅಡಿಕೆ ಬೆಳೆ. ರಾಜ್ಯದ ಅಡಿಕೆ ಮಾರುಕಟ್ಟೆಯಲ್ಲಿ ಶಿವಮೊಗ್ಗಕ್ಕೆ 2 ನೇ ಸ್ಥಾನವಿದೆ. ಇಲ್ಲಿ ಪ್ರತಿವರ್ಷ ಸುಮಾರು 40 ಕೋಟಿ ರೂ. ಮೌಲ್ಯದ 2 ಲಕ್ಷ ಚೀಲಕ್ಕೂ ಹೆಚ್ಚು ಅಡಿಕೆ ವ್ಯಾಪಾರವಾಗುತ್ತದೆ.

ಆದರೆ ಇಲ್ಲಿ ಈಗ ಜು. 20 ರಿಂದ ಅಡಿಕೆ ದಲ್ಲಾಳಿ ಮಂಡಿಗಳವರು ವ್ಯಾಪಾರವನ್ನು ಸ್ಥಗಿತಗೊಳಿಸಿದ್ದಾರೆ. ಇದಕ್ಕೆ, "ಅಡಿಕೆ ಬೆಲೆ ಭಾರಿ ಪ್ರಮಾಣದಲ್ಲಿ ಕುಸಿದಿರುವುದು ಹಾಗೂ ಅಡಿಕೆಯನ್ನು ಕೊಳ್ಳುವವರಿಲ್ಲದೆ ಸುಮಾರು 10 ಕೋಟಿ ರೂ. ಮೌಲ್ಯದ 50 ಸಾವಿರ ಚೀಲ ಅಡಿಕೆ ಕೊಳೆಯುತ್ತ ಬಿದ್ದಿರುವುದು" ಕಾರಣವೆಂದು ತಿಳಿಸಲಾಗಿದೆ.

ಆದರೆ ನಿಜಕ್ಕೂ ಬೆಲೆ ಭಾರಿ ಕುಸಿದಿದೆಯೆ? ಉಳಿದಿರುವ ದಾಸ್ತಾನು ನಿಜಕ್ಕೂ ಭಾರಿ ಪ್ರಮಾಣದ್ದೆ? ದಾಸ್ತಾನು ಹೆಚ್ಚಿಗೆ ಉಳಿಯಲು ಕಾರಣಗಳೇನು? ನಿಜಕ್ಕೂ ಅಡಿಕೆ ಕೊಳ್ಳುವವರಿಲ್ಲವೆ? ಅಥವಾ ಈ ಪರಿಸ್ಥಿತಿಗೆ ಯಾರದಾದರೂ 'ದುರಾಸೆ' ಕಾರಣವೆ? ಎಂಬ ಅಂಶಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಬೆಲೆಯ ಹೋಲಿಕೆ

ಅಡಿಕೆಗೆ ಕಳೆದ ಕೆಲವು ದಶಕಗಳಿಂದಲೂ ಒಳ್ಳೆಯ ಬೆಲೆ ಬಂದಿದ್ದೇ ಇಲ್ಲ. 1982-83 ರಲ್ಲಿ ಕ್ವಿಂಟಾಲಿಗೆ 1800 ರೂ. ದೊರೆಯುತ್ತಿದ್ದುದೇ ಆವರೆಗಿನ ಅತಿ ಹೆಚ್ಚಿನ ಬೆಲೆಯಾಗಿತ್ತು.

ಆದರೆ ಕಳೆದ ವರ್ಷ ಮಾತ್ರ ಅಸ್ಸಾಂನಲ್ಲಿ ಅಡಿಕೆಯ ಉತ್ಪನ್ನ ಭಾರೀ ಪ್ರಮಾಣದಲ್ಲಿ ಕುಂಠಿತಗೊಂಡಿದ್ದರಿಂದಾಗಿ ಇಲ್ಲಿ ಬೆಲೆ ಅಸಾಧಾರಣವಾಗಿ ಏರಿತು. ಒಂದು ಹಂತದಲ್ಲಿ ಧಾರಣೆ ಕ್ವಿಂಟಾಲಿಗೆ 3400 ರೂ.ಗೂ ಮೀರಿ, 3700 ರೂ.ಗಳಿಗೂ ಅಲ್ಪಸ್ವಲ್ಪ ಮಾರಾಟವಾಯಿತ. ಇದರಿಂದ ಬೆಳೆಗಾರರಿಗೂ ಸಾಕಷ್ಟು ಲಾಭವಾಯಿತಲ್ಲದೆ ವರ್ತಕರೂ ಅಗಾಧವಾಗಿ ಲಾಭ ಗಳಿಸಿದರು.

ಆದರೆ ಇಂಥ "ಬಂಪರ್" ಬೆಲೆಯ ಸಾವಾಗಲೂ ಬರಲು ಸಾಧ್ಯವಿಲ್ಲ. ಅದರಂತೆ ಈ ವರ್ಷ ಧಾರಣೆ 2900 ರೂ. ನಿಂದ 3100 ರ ಆಜುಬಾಜಿನಲ್ಲೇ ಇದೆ. (ಪಟ್ಟಿ ನೋಡಿ.) ವರ್ತಕರು ಕಳೆದ ವರ್ಷಕ್ಕಿಂತ ಸುಮಾರು 700 ರಿಂದ 1000 ರೂ.ಗಳಷ್ಟು ಧಾರಣೆ ಕುಸಿದಿರುವುದಾಗಿ ಹೇಳುತ್ತಿದ್ದಾರೆ. ಆದರೆ ನಿಜವಾಗಿ ಈ ವರ್ಷದ ಬೆಲೆ ಕೂಡ ಉತ್ತಮವಾದುದೇ ಆಗಿದೆ.

ಶಿವಮೊಗ್ಗದ ಮಾರುಕಟ್ಟೆಗೆ ಬರುವ ಪ್ರಮುಖ ಅಡಿಕೆಯ ನಮೂನೆಗಳಾದ 'ಸರಕು' ಮತ್ತು 'ಬೆಟ್ಟೆ'ಗೆ ಈ ಸೀಜನ್ನಿನಲ್ಲಿ ದೊರೆತ ಬೆಲೆಯ ಪಟ್ಟಿ (ಕ್ವಿಂಟಾಲಿಗೆ— ರೂ.ಗಳಲ್ಲಿ)

1984		
ನವೆಂಬರ್	3106	2001
ಡಿಸೆಂಬರ್	2847	1846
1985		
ಜನವರಿ	2978	2065
ಫೆಬ್ರವರಿ	2935	1939
ಮಾರ್ಚ್	2882	2074
ಏಪ್ರಿಲ್	2901	2256
ಮೇ	2991	2346
ಜೂನ್	2949	2336
ಜುಲೈ	2800	2279

(ದಿನಾಂಕ 18 ರಂದು)

ಈ ಪಟ್ಟಿ ನೋಡಿದಾಗ ಬೆಲೆಯ ಏರಿಳಿತ ಸುಮಾರು 70 ರಿಂದ 100 ರೂ. ಯೊಳಗೇ ಇರುವುದು ಕಂಡುಬರುತ್ತದೆ. ಇಂಥ ಏರಿಳಿತ ಮುಕ್ತ ಮಾರುಕಟ್ಟೆಯಲ್ಲಿ ಸಾಮಾನ್ಯ.

ದಾಸ್ತಾನು

ಈಗ ಮಾರುಕಟ್ಟೆಯಲ್ಲಿ ಉಳಿದಿರುವ ಸುಮಾರು 50 ಸಾವಿರ ಚೀಲ ಅಡಿಕೆ ದಾಸ್ತಾನು ಕೂಡ, ವರ್ಷಕ್ಕೆ 2 ಲಕ್ಷ ಚೀಲಗಳಷ್ಟು ವಹಿವಾಟು ನಡೆಯುವಂಥ ಈ ಮಾರುಕಟ್ಟೆಗೆ ಅಗಾಧವಾದುದೇನಲ್ಲ. ಪ್ರತಿ ವರ್ಷ ಈ ವೇಳೆಗೆ ಸುಮಾರು 25 ಸಾವಿರ ಚೀಲ ದಾಸ್ತಾನಿರುತ್ತದೆ ಈ ವರ್ಷದ ಆರಂಭದಲ್ಲಿ ಸಹ 26,636 ಚೀಲ ಅಡಿಕೆ ದಾಸ್ತಾನಿತ್ತು. ಅದರ ಜೊತೆಗೆ ಈ ವರ್ಷ ಇಷ್ಟು ವರ್ಷಕ್ಕಿಂತ ಸುಮಾರು 25,730 ಚೀಲಗಳಷ್ಟು ಹೆಚ್ಚು ಅಡಿಕೆ ಮಾರುಕಟ್ಟೆಗೆ ಬಂದಿದೆ.

ಇದರ ಬಗ್ಗೆ ಕೂಡ ಅಂಥ ಆತಂಕ

(ನಾಲ್ಕನೇ ಪುಟಕ್ಕೆ)

ಶಿವಮೊಗ್ಗದಲ್ಲಿ ಅಡಿಕೆ ವ್ಯಾಪಾರ ಸ್ಥಗಿತ

(ಮೂರನೇ ಪುಟದಿಂದ)

ಕ್ಕೇನೂ ಕಾರಣವಿಲ್ಲ. ಏಕೆಂದರೆ ಇಷ್ಟು ದಾಸ್ತಾನು ಮಾರಾಟವಾಗಲು ಹೊಸ ಅಡಿಕೆ ಬರುವವರೆಗೆ ಇನ್ನೂ 3–4 ತಿಂಗಳ ಕಾಲಾವಕಾಶವಿದೆ.

ವರ್ತಕರ ದುರಾಸೆ ?

ಈ 50 ಸಾವಿರ ಚೀಲ ದಾಸ್ತಾನಿನಲ್ಲಿ ಕೂಡ ಸುಮಾರು ಶೇ.80 ಭಾಗ ವರ್ತಕರದು. ಶೇ. 20 ಭಾಗ ಮಾತ್ರ ಬೆಳೆಗಾರರದು. ಇದರರ್ಥವೇನು? ಬೆಳೆಗಾರರ ಹಿತದೃಷ್ಟಿಯಿಂದ ವ್ಯಾಪಾರ ಸ್ಥಗಿತ ಮಾಡಲಾಗಿದೆಯೆಂಬುದು ನಿಜವೆ?

ನಿಜವಾದ ಸಂಗತಿಯೆಂದರೆ, ಕಳೆದ 'ಬಂಪರ್' ಬೆಲೆಯ ರುಚಿಯುಂಡ ವರ್ತಕರು ಈ ವರ್ಷವೂ ಅಂಥದೇ ಇಡುಗಂಟಿನ ನಿರೀಕ್ಷೆಯಲ್ಲಿ ರೈತರಿಂದ ಅಡಿಕೆ ಕೊಂಡು ದಾಸ್ತಾನಿಡಲು ತೊಡಗಿದರು. ಕ್ರಮಬದ್ಧವಾಗಿ ಮಾರುಕಟ್ಟೆಗೆ ಬಿಡುಗಡೆ ಮಾಡಲಿಲ್ಲ.

ಇಲ್ಲಿ ದೊರೆಯುವಂಥ ಕತ್ತರಿಸಿ ಬೇಯಿಸಿದ ಅಡಿಕೆಗೆ ತಮಿಳುನಾಡು ಮತ್ತು ಆಂಧ್ರದಲ್ಲಿ ಮಾತ್ರ ಬೇಡಿಕೆಯಿದೆ. ಅದೇ ಸಾಗರ, ಸಿರ್ಸಿ, ಹುಬ್ಬಳ್ಳಿ, ಮಂಗಳೂರುಗಳಲ್ಲಿ ಮಾರಾಟವಾಗುವ ಅಡಿಕೆಗೆ ಉತ್ತರಭಾರತದಾದ್ಯಂತ ಬೇಡಿಕೆಯಿದೆ. ಅಡಿಕೆಗೆ ರಫ್ತು ಮಾರುಕಟ್ಟೆಯೇನೂ ಇಲ್ಲ. ಅಡಿಕೆ ಅಂಥಾ 'ಅಗತ್ಯ ವಸ್ತು'ವೂ ಅಲ್ಲ. ಸಾಲದ್ದಕ್ಕೆ ಶಿವಮೊಗ್ಗದಲ್ಲಿ ಸಿಗುವಂಥ ಅಡಿಕೆ ಉ. ಕನ್ನಡ ಜಿಲ್ಲೆಯಿಂದಲೂ, ಕೇರಳದಿಂದಲೂ ಹೆಚ್ಚಿನ ಪ್ರಮಾಣದಲ್ಲಿ ಸರಬರಾಜಾಗುತ್ತದೆ.

ಈ ಅಂಶಗಳನ್ನೆಲ್ಲ ಪರಿಗಣಿಸದೆ 'ಲಾಭ'ದ ಆಶೆಯೊಂದನ್ನೇ ಪ್ರಧಾನವಾಗಿಟ್ಟು ಇಲ್ಲಿನ ವರ್ತಕರು ಅಡಿಕೆ ದಾಸ್ತಾನಿಟ್ಟು, ಅದರ ಏರಿದ ಬಡ್ಡಿಯನ್ನೂ ಸಹ ಅಡಿಕೆ ಬೆಲೆಯಲ್ಲಿ ನಿರೀಕ್ಷಿಸುತ್ತಿದ್ದರೆ, ಅತ್ತ ಆಂಧ್ರ, ತಮಿಳುನಾಡಿನವರು ಕೇರಳದಿಂದ ಹೆಚ್ಚಿನ ಪ್ರಮಾಣದ ಅಡಿಕೆ ಖರೀದಿಸಿದ್ದಾರೆ.

ಇಲ್ಲಿನ ವರ್ತಕರೇ ಸಕಾಲದಲ್ಲಿ, ಕ್ರಮಬದ್ಧವಾಗಿ ಅಡಿಕೆಯನ್ನು ಮಾರುಕಟ್ಟೆಗೆ ಬಿಟ್ಟಿದ್ದರೆ ಈ ಹೊತ್ತಿಗೆ 50 ಸಾವಿರ ಚೀಲ ದಾಸ್ತಾನನ್ನೂ ಖಾಲಿಮಾಡಿ ಉಗ್ರಾಣಗಳ ಕಸ ಗುಡಿಸಬಹುದಿತ್ತು !

ಏಕಪಕ್ಷೀಯ, ಕಾನೂನುಬಾಹಿರ

"ಕುಸಿಯುತ್ತಿರುವ ಅಡಿಕೆ ಬೆಲೆ ಸ್ಥಿರಗೊಳಿಸಲು" ವರ್ತಕರು ಆಗಸ್ಟ್ 3 ರವರೆಗೆ ವ್ಯಾಪಾರ ನಿಲ್ಲಿಸುವ ಮೊದಲು ಆರ್.ಎಂ.ಸಿ. ಯೊಂದಿಗಾಗಲಿ, ಜಿಲ್ಲೆಯ ಹಿರಿಯ ಅಧಿಕಾರಿಗಳೊಂದಿಗಾಗಲೀ ಚರ್ಚಿಸಿಲ್ಲ. ಕಡೆಗೆ ವ್ಯಾಪಾರ ನಿಲ್ಲಿಸಿದ ಮೇಲೂ ಸೌಜನ್ಯಕ್ಕಾದರೂ ಈ ವಿಚಾರವನ್ನು ಆರ್‌ಎಂಸಿಗೆ ತಿಳಿಸಿಲ್ಲ. ಬದಲಾಗಿ ಸುಳ್ಳು ಸುದ್ದಿಗಳನ್ನು ಹರಡಿ ರೈತರನ್ನೂ ಸಾರ್ವಜನಿಕರನ್ನೂ ದಾರಿ ತಪ್ಪಿಸುತ್ತಿದ್ದಾರೆ. ಅವರ ಈ ಏಕಪಕ್ಷೀಯ ನಿರ್ಧಾರ ಕಾನೂನುಬಾಹಿರವಾಗಿದ್ದು, ಅದಕ್ಕಾಗಿ ಅವರ ಲೈಸೆನ್ಸ್ ಕೂಡ ರದ್ದು ಮಾಡಬಹುದು.

"ಆರೋಗ್ಯಕರವಲ್ಲ"—ಕ್ಯಾಂಪ್ಕೊ

ವರ್ತಕರು ವ್ಯಾಪಾರ ಸ್ಥಗಿತಗೊಳಿಸಿರು[illegible] 'ಕೇಂದ್ರ ಅಡಿಕೆ, ಕೋಕೋ ಮಾರಾಟ ಮತ್ತು ಪರಿಷ್ಕರಣ ಸಹಕಾರಿ' (ಕ್ಯಾಂಪ್ಕೊ) ಅಧ್ಯಕ್ಷ ವಾರಣಾಸಿ ಸುಬ್ರಾಯ ಭಟ್ "ಆರೋಗ್ಯಕರವಲ್ಲ"ವೆಂದಿದ್ದಾರೆ. "ಅವರು ಅಡಿಕೆಯನ್ನು ಮಾರುಕಟ್ಟೆಗೆ ಕ್ರಮವಾಗಿ ಬಿಡಬೇಕಾಗಿತ್ತು. ಈ ತರಹ ಏರಿಳಿತ ಸಾಮಾನ್ಯ. ಅಲ್ಲದೆ ಈಗ ದೊರೆಯುತ್ತಿರುವ ಬೆಲೆಯೂ ಬೆಳೆಗಾರರ ಮಟ್ಟಿಗೆ ಉತ್ತಮವಾದುದೇ" ಎಂದೂ ಅವರು ಹೇಳಿದ್ದಾರೆ. ವರ್ತಕರು ಅಡಿಕೆ ಕೊಳ್ಳಲು ಮುಂದೆ ಬರದಿದ್ದರೆ ರೈತರ ಹಿತದೃಷ್ಟಿಯಿಂದ ಕ್ಯಾಂಪ್ಕೋ ಅಡಿಕೆ ಕೊಳ್ಳಲು ಸಿದ್ಧವಿದೆಯೆಂದು ಅವರು ತಿಳಿಸಿದ್ದಾರೆ.

ಸದ್ಯಕ್ಕೆ ಕ್ಯಾಂಪ್ಕೊ, ಮ್ಯಾಮ್‌ಕೋಸ್ ಮತ್ತು ಮಲೆನಾಡು ಅಡಿಕೆ ಸಿಂಡಿಕೇಟ್ ಪ್ರೈ.ಲಿ. ('ಸಿಂಡಿಕೇಟ್ ಮಂಡಿ') ಇವರುಗಳು ವ್ಯಾಪಾರದಲ್ಲಿ ಭಾಗವಹಿಸುತ್ತಿದ್ದಾರೆ.

THE MYSORE MATCH COMPANY LTD.,

vidyanagar, B.H. Road, SHIMOGA.

NOTIFICATION

19-7-1985

It ishere by notified for the general information of the public that sealed quotations are invited on 31-7-1985 up to 4 p.m. for supply of the billets of the following spacies :

1. Haluvana
2. Angaracka
3. Chunga
4. Burga
5. Pale
6. Gulmavu
7. Auallari
8. Bende
9. White Mathi

1. The rate shall be quoted separately for each species and at 'so much' per ton of 1000 Kgs. weight. The billets shall be as under.
   (a) Length shall be 24'' only.
   (b) The diameter shall not be less than 10''
   (c) The billets shall be free from all defects like knots, hallows, splits, bands etc,.
   (d) The billets shell be debarked.
   (e) The material shall be fresh.
   (f) The billets not answering to the above will be rejected.
   (g) The end cutting shall be very straight at right angle.
2. The rates quoted shall be for delivery of the sound billets within the yard of the company.
3. The Contractor shall supply the billets at a rate of not less than 12 tons a week or as directed from time to time by the management.
4. No payment will be made for the rejected billets and the contractor shall remove such rejected billets from the premises of the company at his own risk and cost, and no compensation will be given for the material so rejected.
5. payment will be made on the nett weight of the sound billets accepted, and once in a month.
6. The contractor shall make his own arrangements for felling, conversion and transport etc., at his own cost, and no advance of any kind will be granted.
7. The quotations received are subject to approval of the Chairman and Managing Director of the Company.
8. The decision of the Chairman and Managing Director is final on all disputes, if any.

FOR THE MYSORE MATCH CO., LTD.,
(Sd-)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್; ಅಚ್ಚು: ದೀವಟಿಗೆ ಅಚ್ಚುಕೂಟ, ಕೊಪ್ಪ.